**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

**ಸಿ.ಸಿ.ನಂ. 81/2021**

| | | |
|---|---|---|
| ಸಾಕ್ಷಿದಾರರ ಹೆಸರು | : | ವೆಂಕಟಾಚಲ @ ವೆಂಕಟೇಶ |
| ತಂದೆಯ ಹೆಸರು | : | ದಾಸಶೆಟ್ಟಿ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಚಾಮಲಾಪುರ ಗ್ರಾಮ, ಹೆಚ್.ಡಿ. ಕೋಟೆ ತಾ. |

**ಸಾಕ್ಷಿಯನ್ನು ದಿನಾಂಕಃ 19.08.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ಆರೋಪಿಗಳು ನೋಡಿ ಪರಿಚಯವಿರುತ್ತಾರೆ. ಚಾಸಾ-2 ನನಗೆ ಪರಿಚಯವಿರುತ್ತಾರೆ. ದಿನಾಂಕಃ 19.06.2020 ರಂದು ಬೆಳಿಗ್ಗೆ ಸುಮಾರು 10.30-10.45 ಗಂಟೆ ಸಮಯದಲ್ಲಿ ಬಾಚೇಗೌಡನಹಳ್ಳಿಗೆ ಹೋಗುತ್ತಿರುವಾಗ ಆರೋಪಿಗಳು ಚಾಸಾ-1 ಮತ್ತು ಚಾಸಾ-2 ರವರ ಜಮೀನಿಗೆ ಹೋಗಿ ಗಲಾಟೆ ಮಾಡುತ್ತಿದ್ದರು. ನಾನು ಹೋಗಿ ಏಕೆ ಗಲಾಟೆ ಮಾಡುತ್ತೀರಾ ಎಂದು ಹೇಳಿ ಸಮಾಧಾನ ಮಾಡಿ ಬಾಚೇಗೌಡನಹಳ್ಳಿಗೆ ವಾಪಸ್ ಹೋಗಿರುತ್ತೇನೆ. ಪೋಲೀಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಸ.ಸ.ಅ ಕೋರಲಾಗಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸ.ಸ.ಅ ರವರಿಂದಃ**

ಗಲಾಟೆ ನಡೆಯುವಾಗ ಆರೋಪಿಗಳು ಚಾಸಾ-1 ಮತ್ತು ಚಾಸಾ-2 ರವರ ಜಮೀನಿಗೆ ಆಕ್ರಮ ಪ್ರವೇಶ ಮಾಡಿ ಬೋಳೀಮಕ್ಕಳೇ, ಸೂಳೇಮಕ್ಕಳೇ ಇಲ್ಲಿ ಕೆಲಸ

ಮಾಡಬೇಡಿ ಎಂದು ಹೇಳಿರುತ್ತಾರೆಂದರೆ ಸರಿ. ಆರೋಪಿಗಳು ಚಾಸಾ-1 ರಿಂದ ಚಾಸಾ-3 ರವರನ್ನು ಆಕ್ರಮವಾಗಿ ಅಡ್ಡಗಟ್ಟಿರುತ್ತಾರೆಂದರೆ ಸರಿಯಲ್ಲ. ಆರೋಪಿಗಳು ಚಾಸಾ-1 ರಿಂದ ಚಾಸಾ-3 ರವರಿಗೆ ಜಮೀನನ್ನು ಖಾಲಿ ಮಾಡದೇ ಹೋದರೆ ಕೊಲೆ ಮಾಡುತ್ತೇವೆಂದು ಜೀವ ಬೆದರಿಕೆ ಹಾಕಿರುತ್ತಾರೆಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿಗಳು ಚಾಸಾ-1 ರಿಂದ ಚಾಸಾ-3 ರವರನ್ನು ಆಕ್ರಮವಾಗಿ ಅಡ್ಡಗಟ್ಟಿ ಜೀವ ಬೆದರಿಕೆ ಹಾಕಿದ್ದರೂ ಕುಡ ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ. ಡಿ.ಆರ್.ಎಂ. ವಕೀಲರಿಂದಃ**

ಪೋಲೀಸರು ನನ್ನನ್ನು ಠಾಣೆಗೆ ಕರೆಸಿ ವಿಚಾರಣೆ ಮಾಡಿರುವುದಿಲ್ಲ. ಆರೋಪಿಗಳ ಪೈಕಿ ಯಾರು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆಂದು ನನಗೆ ಹೇಳಲಾಗುವುದಿಲ್ಲ. ಚಾಸಾ-2 ನನಗೆ ಪರಿಚಯವಿರುತ್ತಾರೆ. ಆರೋಪಿಗಳ ಜೊತೆ ಇನ್ನು ಹಲವಾರು ಜನ ಗಲಾಟೆ ಮಾಡಲು ಬಂದಿದ್ದರು. ಚಾಸಾ-1 ರಿಂದ ಚಾಸಾ-3 ರವರ ಜೊತೆ 10 ಜನ ಕೆಲಸ ಮಾಡುತ್ತಿದ್ದರು. ನಾನು ಹೇಳಿರುವಂತೆ ಯಾವುದೇ ಗಲಾಟೆ ನಡೆದಿಲ್ಲ ಮತ್ತು ಚಾಸಾ-1 ರಿಂದ ಚಾಸಾ-3 ರವರಿಗಾಗಲೀ ಸದರಿ ಜಮೀನಿನಲ್ಲಿ ಯಾವುದೇ ಹಕ್ಕು ಇರುವುದಿಲ್ಲವೆಂದರೆ ಸರಿಯಲ್ಲ. ಚಾಸಾ-1 ರಿಂದ ಚಾಸಾ-3 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**